1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

Spl.C.150/2023

ದಿಃ 20.09.2024

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-7 Pw-7

| | | |
|---|---|---|
| ಹೆಸರು | ಃ | ಶಿವರಾಜು |
| ತಂದೆಯ ಹೆಸರು | ಃ | ಗೋವಿಂದಯ್ಯ |
| ವಯಸ್ಸು | ಃ | 35 ವರ್ಷ |
| ಉದ್ಯೋಗ | ಃ | ಟೈಲರ್ |
| ವಾಸಸ್ಥಳ | ಃ | ತಾಮಸಂದ್ರ,<br>ಕನಕಪುರ ತಾಲ್ಲೂಕು |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನನಗೆ ಚಾಸಾ.6 ಮತ್ತು 8 ಯಾರು ಎಂಬುದು ಗೊತ್ತಿಲ್ಲ.

2. ಈ ಪ್ರಕರಣದಲ್ಲಿ ನನಗೇನೂ ಮಾಹಿತಿ ಇರುವುದಿಲ್ಲ.

3. ಈಗ ಸುಮಾರು 1 ವರ್ಷದ ಹಿಂದೆ ಯಾವುದೋ ಒಂದು ಬೇರೆ ಕೆಲಸಕ್ಕಾಗಿ ಠಾಣೆಗೆ ಹೋಗಿದ್ದಾಗ ಒಂದು ದಸ್ತಾವೇಜಿನ ಮೇಲೆ ನನ್ನ ಸಹಿಯನ್ನು ಪಡೆದಿರುತ್ತಾರೆ.

4. ಸದರಿ ದಸ್ತಾವೇಜನ್ನು ಈಗ ನೋಡಿ ಗುರುತಿಸುತ್ತಿದ್ದು, ಅದನ್ನು ಈಗಾಗಲೇ ನಿ.ಪಿ.5 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ನನ್ನ ಸಹಿಯನ್ನು ಈಗ ನಿ.ಪಿ.5(ಬಿ) ಎಂದು ಗುರುತಿಸಲಾಯಿತು.

5. ನಿ.ಪಿ.5ರಲ್ಲಿ ಏನು ಬರೆದಿದೆ ಎಂಬುದು ನನಗೆ ಮಾಹಿತಿ ಇರುವುದಿಲ್ಲ.

6. ಪೊಲೀಸರು ನನ್ನ ಸಮಕ್ಷಮದಲ್ಲಿ ಯಾವುದೇ ವಾಹನವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ ಮತ್ತು ಆ ಕುರಿತು ಯಾವುದೇ ಪಂಚನಾಮೆಯನ್ನೂ ಸಹ ಮಾಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)**

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

7. ಈಗ ನನಗೆ ಓದಿ ಹೇಳಿದ ನಿ.ಪಿ.5ರಂತೆ ದಿಃ22.08.2023ರಂದು ಬೆಳಿಗ್ಗೆ 11.00ರಿಂದ ಮಧ್ಯಾಹ್ನ 12.00 ಗಂಟೆವರೆಗೆ ಚಾಸಾ.8 ಈತನು ನನ್ನ ಸಮಕ್ಷಮದಲ್ಲಿ ಒಂದು ದ್ವಿಚಕ್ರ ವಾಹನ ಸಂಖ್ಯೆ.ಕೆಎ-42ಇಇ9268ನ್ನು ಹಾಜರುಪಡಿಸಿದ್ದು, ಅದನ್ನು ಪೊಲೀಸರು ಒಂದು ಅಮಾನತ್ತಿನ ಪಂಚನಾಮೆಯಡಿಯಲ್ಲಿ ಅಮಾನತ್ತುಪಡಿಸಿಕೊಂಡು ಅದರ ಮೇಲೆ ನನ್ನ ಸಹಿಯನ್ನು ಪಡೆದಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

8. ಈಗ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ. ಡಿ.ಆರ್.ಜೆ., ವಕೀಲರಿಂದ ಆರೋಪಿಯ ಪರವಾಗಿಃ ಏನೂ ಇಲ್ಲವೆಂದು ತಿಳಿಸಿರುತ್ತಾರೆ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.